ವಾರ ಕಳೆದು ವಾಪಸು ಬಂದವರನ್ನು ತನ್ನಮ್ಮ ಬಿಗಿ ಮುಖದಿಂದ ಸ್ವಾಗತಿಸಬಹುದೆಂದು ರಾಮಚಂದ್ರ ಅಂದುಕೊಂಡಿದ್ದರೆ ಹಾಗೇನಾಗಲಿಲ್ಲ. 'ಕಳೀತಾ ಎರಡು ದಿನ?' ಅನ್ನುವಷ್ಟಕ್ಕೆ ರಾಧಮ್ಮ ತಮ್ಮ ಅಸಮಾಧಾನವನ್ನು ಸೀಮಿತಗೊಳಿಸಿಕೊಂಡಿದ್ದರು. ತುಟಿಯೊಳಗೇ ನಕ್ಕಿದ್ದ ರಾಮಚಂದ್ರ. ಅತ್ತಿಗೆಗಾಗಿದ್ದರೆ ದೊಡ್ಡ ಮಂಗಳಾರತಿ ಆಗುತ್ತಿತ್ತು. ಆದರೆ ಈ ಸೊಸೆಯನ್ನು ಹಾಗೆ ಹಗುರವಾಗಿ ಕಾಣುವಂತಿಲ್ಲ. ಇವಳ ಮೇಲೆ ಏನಾದರೂ ಅಸಹನೆಯುಂಟಾದರೆ ಅದನ್ನು ಹಿರಿ ಸೊಸೆಯ ಮೇಲೆ ತೀರಿಸಿಕೊಳ್ಳುತ್ತಿದ್ದರೇ ವಿನಾ ಕಿರಿಯವಳನ್ನು ಎದುರು ಹಾಕಿಕೊಳ್ಳುವ ಧೈರ್ಯ ರಾಧಮ್ಮನಿಗೆ ಬರಲಿಲ್ಲ. ಅತ್ತೆಯ ಹಲ್ಲು ಲೆಕ್ಕ ಮಾಡಿಕೊಳ್ಳುತ್ತಿದ್ದ ಹಾಗೆ ನಾಗಶ್ರೀ ಕೂಡಾ ಮೈ ಚಳಿ ಬಿಟ್ಟು ಈ ಮನೆಗೆ ಹೊಂದಿಕೊಳ್ಳ ತೊಡಗಿದ್ದಳು.

* * *

ಹೊಂದಿಕೊಂಡಳೇ ನಾಗಶ್ರೀ? ಆ ಸಂದರ್ಭವೇ ಬರಲಿಲ್ಲ. ತೌರೂರಿನಲ್ಲಿ ಸೂರೆಗೊಂಡ ಸುಖ ಫಲ ಕೊಡುವ ಲಕ್ಷಣ ಕಾಣಿಸಿಕೊಳ್ಳತೊಡಗಿತು. ಬೆಳಗಾಗುತ್ತಿದ್ದಂತೆ ಹೊಟ್ಟೆ ತೊಳಸು. ಉವ್ವೇ.., ಊವ್ವೇ.. ಎಂದು ಇಡೀ ಮನೆ ಅನುರಣಿಸುವಂತಾ ವಾಂತಿ. ಊಟ, ತಿಂಡಿ ಸೇರದೆ ಸೊರಗತೊಡಗಿದಳು ನಾಗಶ್ರೀ.

'ಬೇಕಾರೆ ನಾಕು ದಿನ ತೌರುಮನೆಗೆ ಹೋಗಿ ಇದ್ದು ಬಾ..' ಎಂದು ಅತ್ತೆಯೇ ಉಪಚಾರ ಹೇಳಬೇಕಾದ ಪರಿಸ್ಥಿತಿ. ತುದಿಗಾಲಲ್ಲಿ ಎಂಬಂತೆ ಹೊರಟು ನಿಂತಿದ್ದಳು ನಾಗಶ್ರೀ. ವಿರಹ ವೇದನೆಯನ್ನು ಮನಸ್ಸಿಗೆ ಹಚ್ಚಿಕೊಂಡು ತೊಳಲಾಡಿದವನು ರಾಮಚಂದ್ರ.

'ಇಷ್ಟು ಬೇಗ ಏನು ಅವಸರ ಆಗಿತ್ತೋ? ಅನುಭವಿಸು..' ಹಾಸ್ಯ ಮಾಡಿದರು ಗೆಳೆಯರು ಅನ್ನಿಸಿಕೊಂಡವರು. ರಾಮಚಂದ್ರ ಕೂಡಾ ಇಷ್ಟು ಬೇಗ ಇದನ್ನು ನಿರೀಕ್ಷಿಸಿರಲಿಲ್ಲ. ಆಗಿದ್ದಾಗಿದೆಯಲ್ಲ?

ಹೆಂಡತಿಯನ್ನು ತೌರಿಗೆ ಕಳಿಸಿ ಬರುವ ಹೆಳೆಯಲ್ಲಿ ಮಾವನ ಮನೆಗೆ ಹೋದವನು ಹದಿನೈದು ದಿನ ಅಲ್ಲೇ ಕಳೆದು ಒಬ್ಬಂಟಿಯಾಗಿ ವಾಪಸು ಬಂದ. ಹಲ್ಲಿಗೆ ಹತ್ತುವಂತಿತ್ತು ಮಾವನ ಮನೆಯ ಊಟೋಪಚಾರ. ಎಳೆ ಬಸುರಿ ನಾಗಶ್ರೀಯ ಜೊತೆ ಇವನಿಗೂ ನಾಲಿಗೆ ತಣಿಸುವ ತಿಂಡಿ ತಿನಿಸುಗಳು. ಮಗ್ಗುಲಲ್ಲಿ ಕೂತು ತನ್ನ ಎಲೆಯಲ್ಲಿದ್ದುದನ್ನು ಅವನ ಎಲೆಗೆ ರವಾನಿಸುವಂತಾ ರಸಿಕತೆ ಮೆರೆಯುವ ಪತ್ನಿ.

'ಅಡಿಕೆ ಕೊಯ್ಲಿಲ್ಲ, ಗದ್ದೆ ಕೊಯ್ಲಿಲ್ಲ, ಅಲ್ಲಿ ಹೋಗಿ ಕಡಿದು ಕಟ್ಟೆ ಹಾಕೋಕೇನಿದೆ?' ಅಡ್ಡಗಟ್ಟುವ ನಾಗಶ್ರೀಯ ನಳಿದೋಳುಗಳು.

'ಇಲ್ಲಿ ಕಡಿದು ಕಟ್ಟೆ ಹಾಕೋಕೇನುಂಟೇ?'

'ಬಾಯ್ಬಿಟ್ಟು ಹೇಳ್ಬೇಕಾ?' ಎಂದು ನಾಗಶ್ರೀ ಕಣ್ಣಲ್ಲೇ ಅವನನ್ನು ಕೆಣಕುತ್ತಿದ್ದರೆ ಹೊಸದಾಗಿ ಮದುವೆಯಾದ ಪತಿರಾಯ ಹೆಂಡತಿಯನ್ನಗಲಿ ಹೇಗೆ ಹೋದಾನು? ಆಮೇಲೂ ಅವಳನ್ನು ಜೊತೆಯಲ್ಲಿ ಕಳಿಸಿಕೊಡಲಿಲ್ಲ ಸರೋಜಮ್ಮ.

'ವಾಂತಿ ಭ್ರಾಂತಿ ಗಲಾಟೆ ನಿಂತ ಮೇಲೆ ಮಾರಾಯ್ರಾಗಿ ಕರ್ಕಂಡ್ಹೋಗಿ..' ಅಂದುಬಿಟ್ಟರು ಖಡಕ್ಕಾಗಿ. ಏಕಾಂತದಲ್ಲಿ ಹೇಳಿದಳು ನಾಗಶ್ರೀ,

'ಅಮ್ಮ ಹೇಳೋದು ನಿಜ ಕಣ್ರೀ. ಇಲ್ಲಿ ಬೆಳಗಾತ ಎಷ್ಹೊತ್ತಿಗೆ ಎದ್ರೂ ಕೇಳೋರಿಲ್ಲ. ಹಗಲು ಎಷ್ಹೊತ್ತಿಗೆ ಮಲಗಿದ್ರೂ ಕೇಳೋರಿಲ್ಲ. ಅಲ್ಲಾದ್ರೆ 'ಮನೆ ಮಂದಿಯೆಲ್ಲಾ ಎದ್ದು ಕೆಲಸ ಮಾಡ್ತಿದ್ರೆ ಜೋಬದ್ರನ ಥರ ಹಾಸಿಗೆ ಮೇಲೆ ಬಿದ್ಗಂಡಿರೋಕೆ ಒಂಥರಾ ಆಗುತ್ತೆ ನಂಗೆ..'

'ಅದೂ ನಿನ್ನ ಮನೇನೇ ಅಲ್ವೇನೇ? ಯಾರು ಏನಂತಾರೆ? ಬೇಕಾರೆ ಅಮ್ಮಂಗೆ ನಾನು ಹೇಳ್ತೀನಿ..'

'ಸುಮ್ನಿರಿ ನೀವು. ಇನ್ನೊಂದಷ್ಟು ದಿನ ನಾನು ಇಲ್ಲಿದ್ರೆ ಉಪಾಸ ಇರ್ಬೇಕಾಗುತ್ತೆ ಅಂತ ರಾಯರಿಗೆ ಚಿಂತೇನಾ? ವಾರಕ್ಕೊಂದ್ಸಲ ಬನ್ನಿ. ಯಾರು ಬ್ಯಾಡಾಂತಾರೆ?'

'ಆಯ್ತಾಯ್ತು, ವಾರಕ್ಕೊಂದ್ಸಲ ಬರ್ತೀನಿ, ಏಳು ದಿನ ಇದ್ದು ಹೋಗ್ತೀನಿ, ಆಯ್ತಾ?'

ನಾಗಶ್ರೀ ಅವನ ಕೊರಳಿಗೆ ಜೋತು ಬಿದ್ದು 'ಹಂಗೇ ಮಾಡಿ. ಯಾರು ಬ್ಯಾಡಾಂತಾರೆ?' ಅಂದಿದ್ದಳು.

ಹೆಣ್ಣಿನ ಮಾಯೆ ಅಂದರೆ ಯಾವ ಪರಿಯ ಆಕರ್ಷಣೆ? ಚೊಚ್ಚಲ ಬಸುರಲ್ಲಿ ಹೆಚ್ಚು ಪಕ್ಷ ನಾಗಶ್ರೀ ತೌರಿನಲ್ಲೇ ಕಾಲ ಹಾಕಿದಳು ಅಂದರೆ ಸೂಕ್ತ. ಮೂರು ಮೂರು ದಿನಕ್ಕೆ ಮಗ ಹೆಂಡತಿಯ ಮನೆಗೆ ಓಡುವುದು ರಾಧಮ್ಮನಿಗೆ ವಾರೆಯಾಗುತ್ತಿತ್ತು.

'ಯಾವತ್ತೂ ಸಸಾರ ಆಗ್ಬಾರ್ದು ಕಣೋ. ನಮ್ಮ ಗೌರವ ನಾವು ಉಳಿಸ್ಗಂಬೇಕು' ಅನ್ನುತ್ತಿದ್ದಳು ಅಮ್ಮ.

'ಅಲ್ಲಿಗೆ ಹೋದ್ಮೂಡ್ಲೆ ನನ್ನ ಮರ್ಯಾದೆ ಮುಕ್ಕಾಗಿ ಬಿಡುತ್ತಾ? ಅವರು ಚೆನ್ನಾಗೇ ನಡೆಸ್ಕಂತಾರೆ ನನ್ನ..'

'ಆದ್ರೂ..'

'ಸುಮ್ನಿರೇ ಅಮ್ಮಾ, ನಿಂಗೆ ಊರಿಗಿಲ್ಲದ ಮರ್ಯಾದೆ..'

ಮಗ ಕೈಬಿಟ್ಟು ಹೋದ. ಹೆಂಡತಿಯ ಮನೆಯವರು ತಲೆ ಬೆಳಚಿ ಬುಟ್ಟಿಗೆ ಹಾಕಿಕೊಂಡು ಬಿಟ್ಟರು ಅನಿಸುತ್ತಿತ್ತೇನೋ ಅಮ್ಮನಿಗೆ? ಅನಿಸಿಯೇ ಇರುತ್ತದೆ. ಆದರೆ ಹೆಂಡತಿಯ ಸಾಮೀಪ್ಯ ಸುಖದ ಅದಮ್ಯ ಬಯಕೆ ರಾಮಚಂದ್ರನನ್ನು ಕಟ್ಟಿ ಎಳೆದುಕೊಂಡು ಹೋಗುತ್ತಿತ್ತು ನಾಗಶ್ರೀಯ ಬಳಿಗೆ..

ಗಂಡನ ಮನೆಯಲ್ಲಿ ಬಯಕೆ ಶಾಸ್ತ್ರ ಆಗಿ, ತೌರೂರಿನಲ್ಲಿ ಬಯಕೆಯೂಟ ಮುಗಿದು, ನವಮಾಸ ತುಂಬಿ ಹೆಣ್ಣು ಮಗುವನ್ನು ಹೆತ್ತಳು ನಾಗಶ್ರೀ. ಆ ಸಂದರ್ಭದಲ್ಲಿ ರಾಮಚಂದ್ರ ಮಾವನ ಮನೆಯಲ್ಲಿದ್ದ ಎನ್ನುವುದರಲ್ಲಿ ಆಶ್ಚರ್ಯವೇನಿರಲಿಲ್ಲ.

'ಸಮಯ ಅಂದ್ರೆ ಇನ್ನೊಬ್ರು ಜೊತೇಲಿದ್ರೆ ಧೈರ್ಯ. ಹದಿನೈದ್ದಿನ ಮೊದಲೇ ಬಂದ್ಬಿಡು..' ಎಂದು ಮಾವ ಬಾಯಿ ಬಿಟ್ಟು ಹೇಳಬೇಕಾದ್ದೇನಿರಲಿಲ್ಲ. ಆದರೂ ಹೇಳಿದ್ದರು. ಮತ್ತೇನು? ನಾಗಶ್ರೀಗೆ ಹೆರಿಗೆ ನೋವು ಕಾಣಿಸಿಕೊಳ್ಳುತ್ತಿದ್ದಂತೆ ಫೋನ್ ಮಾಡಿ ಪೇಟೆಯಿಂದ ಕಾರು ತರಿಸಿಕೊಂಡು, ಅವಳನ್ನು ಪೇಟೆಯ ನರ್ಸಿಂಗ್ ಹೋಮಿಗೆ ಸೇರಿಸಿ, ಸುಖ ರೂಪವಾಗಿ ಹೆರಿಗೆಯಾಗಿತ್ತು. ಮೊಮ್ಮಗಳನ್ನು ನೋಡಿ ಹೋಗಲು ಹಿರಿಮಗನನ್ನು ಜೊತೆ ಮಾಡಿಕೊಂಡು ಬಂದಿದ್ದಳು ಅಮ್ಮ. ಪುಟ್ಟ ಗೊಂಬೆಯಂತಿದ್ದ ಮೊಮ್ಮಗಳನ್ನು ನೋಡಿ ಅವಳಿಗೆ ಹಿಗ್ಗು. ಹೆಂಡತಿಯ ಸೇವೆ ಮಾಡುತ್ತಾ ಮಗ ಇನ್ನೂ ಅಲ್ಲೇ ಗೂಟ ಹೊಡೆದುಕೊಂಡಿರುವುದನ್ನು ನೋಡಿ ಕಿರಿಕಿರಿ.

'ಗಂಡಾಂತ್ರ ಕಳೀತಲ್ಲ? ಇನ್ನೂ ನಿಂಗೆಂತ ಕೆಲಸ ಇಲ್ಲಿ? ಹೋಗೋಣ, ನಡಿ..'

'ಇಷ್ಟು ದಿನ ಇದೀನಂತೆ. ಆಸ್ಪತ್ರೆಂದ ಮನೆ ತಲುಪಿಸಿ ಬಂದ್ಬಿಡ್ತೀನಿ ಕಣೇ..'

'ಏನಾರೂ ಕುಣಿ..' ಅಸಮಾಧಾನವಿತ್ತಾ ಅಮ್ಮನ ನುಡಿಯಲ್ಲಿ? ಮಗಳ ಅಪ್ಪನಾದ ಸಂಭ್ರಮದಲ್ಲಿ ಗೊತ್ತಾಗಿರಲಿಲ್ಲ.

ಹನ್ನೊಂದನೆಯ ದಿನ ನಾಗಶ್ರೀಯ ತೌರಿನಲ್ಲಿ ನಾಮಕರಣ ಮಹೋತ್ಸವ ಮುಗಿಸಿಕೊಂಡು ರಾಮಚಂದ್ರನ ಸವಾರಿ ನಾಮಕರಣಕ್ಕೆ ಬಂದಿದ್ದ ತನ್ನ ಪರಿವಾರದೊಡನೆ ವಾಪಸಾಯ್ತು. ದಿನ ಲೆಕ್ಕ ಹಾಕುತ್ತಾ ಎನ್ನುವಂತೆ ಎರಡು ತಿಂಗಳು ಕಳೆಯುತ್ತಿದ್ದಂತೆ ರಾಮಚಂದ್ರ ಮಾವನ ಮನೆಯ ಬಸ್ಸು ಹತ್ತಿದ. ಯಾಕೋ ಆ ಸಲ ಮಾವನ ಮನೆಯಲ್ಲಿ ಹೆಚ್ಚು ದಿನ ಕಾಲು ನಿಲ್ಲಲಿಲ್ಲ. ಹೆಂಡತಿಯ ಜೊತೆ ಏಕಾಂತದಲ್ಲಿ ಎರಡು ಮಾತಾಡುವುದಕ್ಕೂ ಆಸ್ಪದ ಕೊಡದಂತೆ ಅತ್ತೆಮ್ಮ ಬಾಣಂತಿ ಕೋಣೆಯ ಬದಿಯಲ್ಲೇ ಸುಳಿದುಕೊಂಡಿರುತ್ತಿದ್ದರು. ಅವರಿಲ್ಲದಿದ್ದರೆ ಮಾವ. ಪುಟ್ಟ ಮಗಳನ್ನು ಹೂವಿನ ಚೆಂಡಿನಂತೆ ಹಗೂರಕ್ಕೆ ತೊಡೆಯ ಮೇಲೆ ಮಲಗಿಸಿಕೊಂಡು, 'ಪುಟ್ಟೀ.., ಪುಟ್ಟಮ್ಮಾ..' ಎಂದು ಬಾಯ್ತುಂಬಾ ಮುದ್ದುಗರೆದಿದ್ದಷ್ಟೇ ಲಭಿಸಿದ ಭಾಗ್ಯ. ಮೂರು ಹೊತ್ತೂ ಎನ್ನುವಂತೆ ಎಲಡಿಕೆ ಜಗಿಯುತ್ತಾ ರಂಗು ತುಂಬಿದ

## ಭಕ್ತಿ

ಕಾಣದಾ ದೇವರಿಗೆ
ಹಣ್ಣು ಕಾಯಿಯ
ಮಾಡಿಸುವರು
ಕಾಣುವಾ ದೇವರು
ಹೆತ್ತ ತಾಯಿಯ
ಮರೆವರು

★ ಪತ್ತಂಗಿ ಎಸ್. ಮುರಳಿ

